ಅಧ್ಯಕ್ಷರು: ಈಗಾಗಲೇ ನಿಮ್ಮದೊಂದು ಗಮನ ಸೆಳೆಯುವ ಸೂಚನೆಯನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಟ್ಟಿದ್ದೇನಲ್ಲಾ?

ಶ್ರೀ ಕೆ.ಎನ್. ರಾಜಣ್ಣ: ಮಾನ್ಯ ಅಧ್ಯಕ್ಷರೆ, ಅದು ಮೊನ್ನೆ ದಿವಸದ್ದು. ಅಂದು ಕೊಟ್ಟ ಉತ್ತರ ಸರಿಯಿರಲಿಲ್ಲವೆಂದು ಮಾರನೇ ದಿವಸ ಅದನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೀರಿ. ಅದರಂತೆ ಅದನ್ನು ಇಂದು ಪ್ರಸ್ತಾಪಿಸಿದ್ದೆ.

ಅಧ್ಯಕ್ಷರು: ಅಧಿಕಾರಿಗಳು ಮಾಡಿದ್ದರಿಂದ ಈ ರೀತಿಯಾಗಿದೆ. ಇವರು ಹೇಳುವುದೊಂದು, ಮಾಡುವುದೊಂದು ಮಾನ್ಯ ರಾಜಣ್ಣನವರೆ, ಆಯಿತು, ಇದನ್ನೂ ಪ್ರಸ್ತಾಪಿಸಿ.

17. ವಿಷಯ: ಮಧುಗಿರಿ ವಿಧಾನಸಭಾ ಕ್ಷೇತ್ರದ ಬೇಡತ್ತೂರು ಚೆನ್ನಮ್ಮ ವಸತಿ ಶಾಲೆಯಲ್ಲಿ ಜರುಗುತ್ತಿರುವ ಅಕ್ರಮ ಚಟುವಟಿಕೆ ಮತ್ತು ಕರ್ತವ್ಯ ಲೋಪದ ಬಗ್ಗೆ.

ಶ್ರೀ ಕೆ.ಎನ್. ರಾಜಣ್ಣ: ಮಾನ್ಯ ಅಧ್ಯಕ್ಷರೆ, ಮಧುಗಿರಿ ವಿಧಾನಸಭಾ ಕ್ಷೇತ್ರದ ಬೇಡತ್ತೂರು ಚೆನ್ನಮ್ಮ ವಸತಿ ಶಾಲೆಯಲ್ಲಿ ಜರುಗುತ್ತಿರುವ ಅಕ್ರಮ ಚಟುವಟಿಕೆ ಮತ್ತು ಕರ್ತವ್ಯ ಲೋಪದ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, (ಪ.ವರ್ಗ), ಬೇಡತ್ತೂರು ಗೇಟ್, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ, ಇಲ್ಲಿ ಜರುಗುತ್ತಿರುವ ಅಕ್ರಮ ಚಟುವಟಿಕೆ ಮತ್ತು ಕರ್ತವ್ಯಲೋಪದ ಬಗ್ಗೆ ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ಇವರು ದಿನಾಂಕ: 24.01.2014 ರಂದು ಭೇಟಿ ನೀಡಿ ವರದಿ ಸಲ್ಲಿಸಿರುತ್ತಾರೆ. ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯ ಯೋಜನಾಧಿಕಾರಿಗಳನ್ನು ದಿನಾಂಕ: 27.01.2014 ರಂದು ನಿಯೋಜಿಸಿ ವರದಿಯನ್ನು ಪಡೆಯಲಾಗಿದೆ. ಸದರಿ ಅಧಿಕಾರಿಗಳು, ವಸತಿ ಶಾಲೆಗೆ ಭೇಟಿ ನೀಡಿ ಶಾಲೆಯ ಪ್ರಾಂಶುಪಾಲರು,

ಶಿಕ್ಷಕರು ಮತ್ತು ಸಿಬ್ಬಂದಿಗಳನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ ಹಾಗೂ ವಿದ್ಯಾರ್ಥಿಗಳಿಂದ ಮಾಹಿತಿ ಪಡೆದಿದ್ದು ಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯು ಸತ್ಯಕ್ಕೆ ದೂರವಾಗಿದೆಯೆಂದು, ವಸತಿ ಶಾಲೆಯಲ್ಲಿ ಯಾವುದೇ ಅಕ್ರಮ ಚಟುವಟಿಕೆ ಮತ್ತು ಕರ್ತವ್ಯಲೋಪವಾಗಿಲ್ಲವೆಂದು ವರದಿ ಮಾಡಿರುತ್ತಾರೆ.

ಶ್ರೀ ಕೆ.ಎನ್. ರಾಜಣ್ಣ: ಮಾನ್ಯ ಅಧ್ಯಕ್ಷರೆ, ಅಲ್ಲಿ 250 ಹೆಣ್ಣುಮಕ್ಕಳು ವಸತಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅಲ್ಲಿ ಇರತಕ್ಕಂಥ ವ್ಯವಸ್ಥೆಯನ್ನು ತಾವು ನೋಡಿದರೆ, ಅಲ್ಲಿ ಮಕ್ಕಳಲ್ಲ, ಯಾವ ಗುಗ್ಗೂಗಳೂ ವಾಸ ಮಾಡುವುದಕ್ಕಾಗುವುದಿಲ್ಲ. ಅದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು: ಹಾಸ್ಟೆಲ್‌ನಲ್ಲಿ ಅಕ್ರಮ ಚಟುವಟಿಕೆಗಳು ನಡೆಯುತ್ತವಂತೆ. ಮಾನ್ಯ ಸಚಿವರೆ, ಇದರ ಬಗ್ಗೆ ಉತ್ತರ ಹೇಳಿ,

ಶ್ರೀ ಹೆಚ್. ಆಂಜನೇಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ರಾಜಣ್ಣನವರು ಏನೊಂದು ಆರೋಪ ಮಾಡಿದ್ದಾರೋ, ಅದರ ಬಗ್ಗೆ ಮಾನ್ಯ ಸದಸ್ಯರಾದ ರಾಜಣ್ಣನವರ ಸಮ್ಮುಖದಲ್ಲಿಯೇ ಕೂಲಂಕಷವಾಗಿ ಪರಿಶೀಲನೆ ನಡೆಸಲಿಕ್ಕೆ ನಾಳೆಯೇ ಅಲ್ಲಿಗೆ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರನ್ನು ಕಳುಹಿಸಿಕೊಡುತ್ತೇನೆ. ಅಲ್ಲಿ ಮಾನ್ಯ ಸದಸ್ಯರ ಸಮ್ಮುಖದಲ್ಲಿಯೇ ವಿಚಾರಣೆ ನಡೆಸಿ ಅದನ್ನು ಸರಿಪಡಿಸುತ್ತೇನೆ. ಅಲ್ಲಿ ಯಾವುದೇ ರೀತಿಯ ಅಕ್ರಮ ಇದ್ದರೆ, ಅಕ್ರಮ ಎಸಗಿದವರ ವಿರುದ್ಧ ನಾನು ಶಿಸ್ತಿನ ಕ್ರಮವನ್ನು ಕೈಗೊಳ್ಳುತ್ತೇನೆ.

ಅಧ್ಯಕ್ಷರು: ಓಕೆ.

ಶ್ರೀ ಕೆ.ಎನ್.ರಾಜಣ್ಣ: ಮಾನ್ಯ ಸಚಿವರು ನೀಡಿರುವ ಉತ್ತರವನ್ನು ವಾಪಸ್ ತೆಗೆದುಕೊಳ್ಳಬೇಕು

ಅಧ್ಯಕ್ಷರು: ಏಕೆ?

ಶ್ರೀ ಕೆ.ಎನ್. ರಾಜಣ್ಣ: ಮಾನ್ಯ ಸಚಿವರು ಅಲ್ಲಿ ಏನೂ ನಡೆಯುತ್ತಿಲ್ಲವೆಂದು ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು: ಮಾನ್ಯ ರಾಜಣ್ಣನವರೆ, ನಾನು ಹೇಳುವುದು ಕೇಳಿ, ಮಾನ್ಯ ಸಚಿವರು ನೀಡಿದ ಉತ್ತರ ಸದನದ ಕಡತದಲ್ಲಿ ಬಂದು ಹೋಗಿದೆ. ಅದನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

ಶ್ರೀ ಹೆಚ್. ಆಂಜನೇಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಹೇಳಿದ್ದಾರೋ, ಅದಕ್ಕೆ ಪೂರಕವಾಗಿ ನಮ್ಮ ಅಧಿಕಾರಿಗಳನ್ನು ಕಳುಹಿಸಿಕೊಟ್ಟು, ಅಲ್ಲಿ ಆಗಿರತಕ್ಕ ಅಕ್ರಮಗಳು ಇರಬಹುದು, ಅನ್ಯಾಯ ಇರಬಹುದು, ಭ್ರಷ್ಟಾಚಾರ ಇರಬಹುದು, ಯಾರು ಎಸಗಿದ್ದಾರೋ ಅವರ ವಿರುದ್ಧ ಕ್ರಮ ಕೈಗೊಳ್ಳುವುದಕ್ಕೆ ನಾನು ಹಿಂದು-ಮುಂದು ನೋಡುವುದಿಲ್ಲ. ಮಾನ್ಯ ಸದಸ್ಯರ ಸಮ್ಮುಖದಲ್ಲಿಯೇ ಅದನ್ನು ಸರಿಪಡಿಸುತ್ತೇನೆ. ಅದನ್ನು ಒಂದು ವಾರದಲ್ಲೇ ಮಾಡುತ್ತೇನೆ.

ಅಧ್ಯಕ್ಷರು: ಓಕೆ.

ಶ್ರೀ ಬಿ.ಬಿ. ನಿಂಗಯ್ಯ: ಮಾನ್ಯ ಅಧ್ಯಕ್ಷರೆ, ನನ್ನದೊಂದು ಇನ್ನೂ ಇದೆ.

ಅಧ್ಯಕ್ಷರು: ಈಗಾಗಲೇ ಸಮಯವಾಗಿದೆ. ಇನ್ನೂ ಅಜೆಂಡಾದಲ್ಲಿ ಬಹಳಷ್ಟು ಪ್ರಸ್ತಾಪಿಸಬೇಕಾದ ವಿಷಯಗಳಿವೆ. ಎಲ್ಲವನ್ನೂ ನಾನು ಇವತ್ತೇ ಪೂರೈಸಬೇಕಾಗಿದೆ. ಒಬ್ಬೊಬ್ಬ ಮಾನ್ಯ ಸದಸ್ಯರ ಒಂದೊಂದು ಗಮನ ಸೆಳೆಯುವ ಸೂಚನೆಗಳನ್ನು ಮಾತ್ರ ಅಜೆಂಡಾದಲ್ಲಿ ಹಾಕಲು ನಾನು ಹೇಳಿದ್ದೆ. ಆದರೆ ಇಲ್ಲಿ ಒಬ್ಬೊಬ್ಬರ ಎರಡೆರಡು ಸೂಚನೆಗಳನ್ನು ಹಾಕಿದ್ದರಿಂದ ಸಮಸ್ಯೆಯಾಯಿತು.

ಶ್ರೀ ಬಿ.ಬಿ. ನಿಂಗಯ್ಯ: ಅವತ್ತಿನ ದಿವಸದ ಸೂಚನೆಯನ್ನು ಅವತ್ತೇ ತೆಗೆದುಕೊಂಡರೆ ಈ ಸಮಸ್ಯೆ ಆಗುವುದಿಲ್ಲ. ಹಿಂದಿನ ದಿನದ ಅಜೆಂಡಾ ಮುಂದುವರೆಸಿದ್ದರಿಂದ, ಈ ರೀತಿಯಾಗಿದೆ.

ಅಧ್ಯಕ್ಷರು: ಈಗಾಗಲೇ ಸಮಯವಾಗಿದೆ. ದಯವಿಟ್ಟು ಅರ್ಥ ಮಾಡಿಕೊಳ್ಳಿ, ಪ್ರಸ್ತಾಪಿಸಲು ಇನ್ನೂ ಬಹಳಷ್ಟು ವಿಷಯಗಳಿವೆ. ಸಮಯವಿದ್ದಲ್ಲಿ ನಾನು ಪ್ರಸ್ತಾಪಿಸಲು ಅವಕಾಶ ಮಾಡಿಕೊಡುತ್ತೇನೆ.

13. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ಅಧ್ಯಕ್ಷರು: ಶಿವಲಿಂಗೇ ಗೌಡರದರು, ಎತ್ತಿನ ಹೊಳೆ ಏತಕ್ಕೆ ಬಂತು.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು: ಉತ್ತರವಿದ್ದರೆ ಹೇಳಿ, ಮಂತ್ರಿಗಳೇ ಒಂದು ಕೆಲಸ ಮಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅಧ್ಯಕ್ಷರೆ, ನಮಗೆ ತೌಡು ಕುಟ್ಟೋ ಉತ್ತರ ಸರ್ಕಾರದಿಂದ ಬೇಡ.

ಅಧ್ಯಕ್ಷರು: ಅದನ್ನೇ ನಾನು ಹೇಳಿದೆ. ಮಂತ್ರಿಗಳೇ ಒಂದು ಕೆಲಸ ಮಾಡಿ. ಕುಮಾರಸ್ವಾಮಿಯವರು ಹೇಳುವುದು ಸರಿ ಇದೆ, ಅವತ್ತು ನಾನು ಸಲಹೆ ಮಾಡಿದ್ದೆ. ಆ ಪ್ರದೇಶದ ಜನರನ್ನು ಒಂದು ಸಾರಿ ಕರೆಯಿಸಿ, ಕುಳಿತು ಚರ್ಚೆ ಮಾಡಿ, ಸಾಧಕ ಬಾಧಕವನ್ನು ಕಂಡುಹಿಡಿಯಿರಿ, ಆ ರೀತಿ ಮಾಡಿದರೆ ಅವರಿಗೂ ಸಮಾಧಾನವಾಗುತ್ತದೆ. ಮುಂದೆ ಏನು ಹೆಜ್ಜೆ ಇಡಬೇಕೆನ್ನುವುದರ ಬಗ್ಗೆ ನಿಮಗೂ ಆಲೋಚನೆ ಬರುತ್ತದೆ.

ಶ್ರೀ ಎಂ.ಬಿ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ನಿಮ್ಮ ಸಲಹೆಯನ್ನು ಸ್ವಾಗತ ಮಾಡುತ್ತೇನೆ. ನಿನ್ನೆ ಇಲ್ಲಿ ಏನಾಯಿತು ಎಂದರೆ, ಮಾನ್ಯ ಕುಮಾರಸ್ವಾಮಿಯವರು ಏನು ಹೇಳಿದರೆಂದರೆ, ನಿಯಮ–69ಕ್ಕೆ ಏನು ಉತ್ತರ ಕೊಡುತ್ತೀರಿ, ಅದನ್ನು ನಾನು ಬಜೆಟ್ ಮೇಲೆ ಮಾತನಾಡಿದ ಮೇಲೆ ಉತ್ತರ ಕೊಡಿ ಎಂದು ಹೇಳಿದರು. ಅದಕ್ಕೆ ಸುಮ್ಮನಾದೆ. ತಾವು ಹೇಳಿದಂತೆ ಸಭೆ ಮಾಡಿ ಸುದೀರ್ಘವಾಗಿ ಚರ್ಚೆ ಮಾಡಲಾಗುವುದು.